ಸಿದ್ದರಾಮಯ್ಯ
ಮುಖ್ಯ ಮಂತ್ರಿ

ಸಿಎಂ/ಪಿಎಸ್/270/2015

ವಿಧಾನ ಸೌಧ
ಬೆಂಗಳೂರು - 560 001

ದಿನಾಂಕ 31-12-2015

## ಸಂದೇಶ

ಸಕಾಲ ಸೇವೆಗಳ ಸಮಯಬದ್ಧ ವಿಲೇವಾರಿ ಪ್ರಗತಿಯು ದಿನೇ ದಿನೇ ಉತ್ತಮಗೊಳ್ಳುತ್ತಿದೆ ಎಂಬುದು ಹರ್ಷದಾಯಕ ಸಂಗತಿಯಾಗಿದೆ. ನಾವು ಹೆಚ್ಚಿನ ಸ್ವೀಕೃತಿ, ಕ್ಷಿಪ್ರ ವಿಲೇವಾರಿ ಮತ್ತು ಬಾಕಿ ಪ್ರಕರಣಗಳ ಗಣನೀಯ ಇಳಿಕೆಯನ್ನು ಕಾಣಬಹುದು. ಇದು ಸ್ವಾಗತಾರ್ಹ ಬೆಳವಣಿಗೆಯಾಗಿದೆ.

ಹೊಸ ಸೇವೆಗಳು ಸಕಾಲದ ತೆಕ್ಕೆಗೆ ಸೇರ್ಪಡೆಯಾಗುತ್ತಿದ್ದಂತೆಯೇ ಸಕಾಲೇತರ ದೂರುಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಇದು ಸಕಾಲ ಸೇವೆಗಳು ಪರಿಪಕ್ವವಾಗುತ್ತಿದೆ ಎಂಬುದರ ಸಂಕೇತವಾಗಿದೆ. ಇದಕ್ಕೆ ಪೂರಕ ಎಂಬಂತೆ ಆಗಸ್ಟ್ 2015 ರಲ್ಲಿ 28,90,040 ಅರ್ಜಿಗಳನ್ನು ಸ್ವೀಕೃತವಾಗಿದೆ. ಅವುಗಳಲ್ಲಿ 33,71,940 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ **ವಯೋ ಪ್ರಮಾಣ ಪತ್ರವನ್ನು ನೀಡುವುದು, ಅಶಕ್ತ ಪ್ರಮಾಣ ಪತ್ರವನ್ನು ನೀಡುವುದು** ಮತ್ತು **ಗಾಯದ ಪ್ರಮಾಣ ಪತ್ರ** ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ **ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ನೊಂದಣಿ** ಬೇಡಿಕೆಯ ಸೇವೆಗಳಾಗಿವೆ. ಈಗಾಗಲೇ ಈ ಸೇವೆಗಳನ್ನು 20,000 ಕ್ಕೂ ಅಧಿಕ ನಾಗರೀಕರು ಸಕಾಲದಡಿ ಕಾಲಮಿತಿಯಲ್ಲಿ ಆಗಸ್ಟ್ 2015 ರ ತಿಂಗಳಲ್ಲೇ ಪಡೆದಿದ್ದಾರೆ.

ಸಕಾಲಕ್ಕೆ ಎಲ್ಲಾ ವಲಯಗಳಿಂದಲೂ ಪ್ರಶಂಸೆಗಳು ಬರುತ್ತಿವೆ. ಇತರ ರಾಜ್ಯಗಳು ನಮ್ಮನ್ನು ಮಾರ್ಗದರ್ಶಿಯಾಗಿ ಕಾಣುತ್ತಾ ಈ ಯೋಜನೆಯನ್ನು ಅವರ ರಾಜ್ಯಗಳಲ್ಲಿ ಅನುಷ್ಠಾನಗೊಳಿಸಲು ಸಲಹೆ ಸೂಚನೆಗಳನ್ನು ಪಡೆಯುತ್ತಿದ್ದಾರೆ. ನಾಗರೀಕ ಸೇವೆಗಳನ್ನು ನೀಡುವಲ್ಲಿ ನಮ್ಮ ಕಾರ್ಯನಿರ್ವಹಣೆಯನ್ನು ಕಾಲ ಕಾಲಕ್ಕೆ ಮೌಲ್ಯಮಾಪನ ಮಾಡುತ್ತಾ, ಅವುಗಳನ್ನು ನಿರಂತರವಾಗಿ ಉತ್ತಮಪಡಿಸುತ್ತಾ ಮುಂಚೂಣಿಯಲ್ಲಿದ್ದೇವೆ.

ರಾಷ್ಟ್ರೀಯ ಸೂಚನಾ ಕೇಂದ್ರವು ನೀಡುತ್ತಿರುವ ಇ-ವೇದಿಕೆಯನ್ನು ಬಳಸಿ ಉತ್ತಮ ಆಡಳಿತವನ್ನು ನೀಡುವಲ್ಲಿ ಸಕಾಲ ಮಿಷನ್ ಬದ್ಧವಾಗಿದೆ. ಇದರ ಲಾಭ ಪಡೆದು ಎಲ್ಲಾ ಇಲಾಖೆಗಳೂ ಸಕಾಲ ಮಿಷನ್‌ನೊಂದಿಗೆ ಸಹಕರಿಸುವಂತೆ ಸೂಚಿಸುತ್ತೇನೆ.

(ಸಿದ್ದರಾಮಯ್ಯ)

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಆಡಳಿತ ಸುಧಾರಣೆಗಳು),
ಬಹುಮಹಡಿ ಕಟ್ಟಡ,
ಡಾ ಬಿ. ಆರ್. ಅಂಬೇಡ್ಕರ್ ರಸ್ತೆ,
ಬೆಂಗಳೂರು – 560 001.

ಟಿ.ಬಿ. ಜಯಚಂದ್ರ
ಕಾನೂನು, ಸಂಸದೀಯ ವ್ಯವಹಾರಗಳು,
ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು

ಮೇಲ್: lawministeroffice@gmail.com
ದೂರವಾಣಿ : ಕಛೇರಿ : 22254661
ಫ್ಯಾಕ್ಸ್ : 22033439
ಕೊಠಡಿ ಸಂಖ್ಯೆ: 327, 3ನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001

## ಸಂದೇಶ

ಭಾರತ ಸರ್ಕಾರವು ಎಲ್ಲಾ ರಾಜ್ಯಗಳಲ್ಲಿ ಅನುಷ್ಠಾನಗೊಳಿಸಲು ಆಯ್ಕೆ ಮಾಡಿರುವ ಕೆಲವೇ ಯೋಜನೆಗಳಲ್ಲಿ ಸಕಾಲ ಯೋಜನೆಯು ಗುರುತಿಸಲ್ಪಟ್ಟಿರುವುದು ಹೆಮ್ಮೆಯ ಸಂಗತಿ. ರಾಜಕೀಯ ನಾಯಕತ್ವ ಮತ್ತು ನಾಗರೀಕರ ಸಹಭಾಗಿತ್ವ ಸಕಾಲ ಯೋಜನೆಯನ್ನು ನಾಗರೀಕ ಸೇವಾ ವಿಲೇವಾರಿಯ ಮುಂಚೂಣಿಗೆ ತಂದು ನಿಲ್ಲಿಸಿದೆ.

ತಮ್ಮ ಹಲವಾರು ಸೇವೆಗಳನ್ನು ಸಕಾಲದಡಿ ತಂದಿರುವ 52 ಇಲಾಖೆ/ಸಂಸ್ಥೆಗಳ ಸಹಯೋಗಕ್ಕೆ ನಾನು ಮೆಚ್ಚುಗೆ ವ್ಯಕತಪಡಿಸುತ್ತೇನೆ. ನಾಗರೀಕರ ಜೀವನವನ್ನು ಮತ್ತಷ್ಟು ಸುಲಲಿತಗೊಳಿಸಲು ಇಲಾಖೆಗಳು ಹೆಚ್ಚು ನಾಗರೀಕ ಕೇಂದ್ರಿತ ಸೇವೆಗಳನ್ನು ಸಕಾಲದಡಿ ತರಲು ಮುಂದು ಬರಬೇಕು.

United Nations Development Program (UNDP) ಯ ತಂಡವು ಈ ತಿಂಗಳಿನಲ್ಲಿ ಸಕಾಲ ಮಿಷನ್‌ಗೆ ಭೇಟಿ ನೀಡಿ, ರಾಜ್ಯದ ನಾಗರೀಕರಿಗೆ 8 ಕೋಟಿಗೂ ಹೆಚ್ಚಿನ ಸಮಯಬದ್ಧ ಸೇವೆಗಳನ್ನು ನೀಡಿದ ಸರ್ಕಾರ ಮತ್ತು ಸಕಾಲ ಮಿಷನ್‌ನ ಕಾರ್ಯ ಸಾಧನೆಯನ್ನು ಅಭಿನಂದಿಸಿದಿರುವುದು ಶ್ಲಾಘನೀಯ.

ಸಕಾಲ ಸೇವೆಗಳನ್ನು ಆದ್ಯತೆ ಮೇರೆಗೆ ಪರಿಗಣಿಸುವಂತೆ ನಾನು ಪ್ರತ್ಯೇಕವಾಗಿ ಜಿಲ್ಲಾಡಳಿತ ಹಾಗೂ ಇತರ ಅಧಿಕಾರಿ ವರ್ಗವನ್ನು ಒತ್ತಾಯಿಸುತ್ತೇನೆ. ಸಕಾಲವು ನೇರವಾಗಿ ನಾಗರೀಕರಿಗೆ ಅನುಕೂಲಕರವಾಗಿದೆ. ಈ ಪರಿಶ್ರಮದಲ್ಲಿ ಯಾವುದೇ ಅಡೆತಡೆಗಳನ್ನು ನಿರ್ಲಕ್ಷಿಸುವಂತಿಲ್ಲ.

24/9

(ಟಿ.ಬಿ.ಜಯಚಂದ್ರ)

# ಮಿಷನ್ ನಿರ್ದೇಶಕರ ಮೇಜಿನಿಂದ

### ಶ್ರೇಯಾಂಕ: ಮೊದಲ 3 ಶ್ರೇಯಾಂಕಿತ ಜಿಲ್ಲೆಗಳು

| ಶ್ರೇಯಾಂಕ | ಜಿಲ್ಲೆ | ಜಿಲ್ಲೆ | ಶ್ರೇಯಾಂಕ |
|---|---|---|---|
| 1 | ಚಿಕ್ಕಬಳ್ಳಾಪುರ | ಧಾರವಾಡ | 28 |
| 2 | ತುಮಕೂರು | ಮೈಸೂರು | 29 |
| 3 | ಉಡುಪಿ | ಬೆಂಗಳೂರು | 30 |

31/08/2015 ರಂದು 12:00:00 ರಂದು ದಾಖಲೆಗಳಂತೆ

ಹಿಂದಿನ ತಿಂಗಳಿಗೆ ಹೋಲಿಸಿದಲ್ಲಿ 13 ಜಿಲ್ಲೆಗಳು ಉತ್ತಮ ಪ್ರಗತಿ ಹೊಂದಿವೆ. ಹಿಂದಿನ ತಿಂಗಳಿಗೆ ಹೋಲಿಸಿದರೆ ಕೊಡಗು ಜಿಲ್ಲೆಯು 24ನೇ ಸ್ಥಾನದಿಂದ 9 ನೇ ಸ್ಥಾನ, ದಕ್ಷಿಣ ಕನ್ನಡ ಜಿಲ್ಲೆಯು 28ನೇ ಸ್ಥಾನದಿಂದ 18 ನೇ ಸ್ಥಾನ, ಚಿಕ್ಕಮಗಳೂರು ಜಿಲ್ಲೆಯು 26ನೇ ಸ್ಥಾನದಿಂದ 12 ನೇ ಸ್ಥಾನ ಪಡೆದಿವೆ.

ಹಿಂದಿನ ತಿಂಗಳಿಗೆ ಹೋಲಿಸಿದಲ್ಲಿ ಹಾಸನ ಜಿಲ್ಲೆಯು 8ನೇ ಸ್ಥಾನದಿಂದ 19 ನೇ ಸ್ಥಾನಕ್ಕೆ ಮತ್ತು ಕಲಬುರಗಿ ಜಿಲ್ಲೆಯು 5ನೇ ಸ್ಥಾನದಿಂದ 20 ನೇ ಸ್ಥಾನಕ್ಕೆ ಕುಸಿದಿವೆ.

### ಅರ್ಜಿಗಳ ಸ್ವೀಕೃತಿ ಮತ್ತು ವಿಲೇವಾರಿ ಸ್ವರೂಪ:

| ತಿಂಗಳು | ಸ್ವೀಕೃತಿಗಳು | ವಿಲೇವಾರಿ |
|---|---|---|
| **ಆಗಸ್ಟ್ -2015** | 28,90,040 | 33,71,940 |
| ಒಟ್ಟಾರೆ | 8,85,59,438 | 8,77,11,989 |

31/08/2015 ರಂದು 12:00:00 ರಂದು ದಾಖಲೆಗಳಂತೆ

### ತಾಲ್ಲೂಕುಗಳ ಶ್ರೇಯಾಂಕ: ಮೊದಲ 3 ಶ್ರೇಯಾಂಕಿತ ತಾಲ್ಲೂಕುಗಳು

| ಶ್ರೇಯಾಂಕ | ತಾಲ್ಲೂಕು | ಜಿಲ್ಲೆ |
|---|---|---|
| 1 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ |
| 2 | ಕುಮುಟ | ಉತ್ತರ ಕನ್ನಡ |
| 3 | ಕಾರವಾರ | ಉತ್ತರ ಕನ್ನಡ |

31/08/2015 ರಂದು 12:00:00 ರಂದು ದಾಖಲೆಗಳಂತೆ

### ವಿಧಾನಸಭಾ ಕ್ಷೇತ್ರವಾರು ಶ್ರೇಯಾಂಕ: ಮೊದಲ 3 ಶ್ರೇಯಾಂಕಿತ ವಿಧಾನಸಭಾ ಕ್ಷೇತ್ರಗಳು

| ಶ್ರೇಯಾಂಕ | ವಿಧಾನಸಭಾ ಕ್ಷೇತ್ರ | ಜಿಲ್ಲೆ |
|---|---|---|
| 1 | ಉಡುಪಿ | ಉಡುಪಿ |
| 2 | ಚಾಮರಾಜಪೇಟೆ | ಬೆಂಗಳೂರು |
| 3 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ |

31/08/2015 ರಂದು 12:00:00 ರಂದು ದಾಖಲೆಗಳಂತೆ

## ಬಾಕಿ, ವಿಳಂಬ, ತಿರಸ್ಕೃತ ಅರ್ಜಿಗಳು ಮತ್ತು 7ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡಿರುವ ಕಛೇರಿಗಳು

**ಬಾಕಿ ಪ್ರಕರಣಗಳು:** ಹಿಂದಿನ ತಿಂಗಳ 36,115 ಬಾಕಿ ಪ್ರಕರಣಗಳಿಗೆ ಹೋಲಿಸಿದಲ್ಲಿ ಈ ತಿಂಗಳ ಕೊನೆಗೆ ಒಟ್ಟು 29,325 ಬಾಕಿ ಪ್ರಕರಣಗಳು ಕಂಡು ಬಂದಿವೆ. ಇದರಲ್ಲಿ ಕಂದಾಯ ಮತ್ತು ಒಳಾಡಳಿತ ಇಲಾಖೆಗಳ ಪ್ರಮಾಣವು 70% ಇದೆ. ಜಿಲ್ಲಾ ಹಂತದಲ್ಲಿ ಆಯಾ ಜಿಲ್ಲಾಧಿಕಾರಿಗಳು ಸಕಾಲ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸುತ್ತಿದ್ದಾರೆ. ಸಕಾಲ

ಮಿಷನ್ ಮಟ್ಟದಲ್ಲಿ ರಾಜ್ಯದಲ್ಲಿ ವಿಳಂಬ ವಿಲೇವಾರಿ ಕಡಿಮೆಗೊಳಿಸಲು ಇಲಾಖಾವಾರು ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ.ಅವಧಿ ಮೀರಿ ಬಾಕಿಯನ್ನು ಹೆಚ್ಚಾಗಿ ಉಳಿಸಿಕೊಂಡಿರುವ ಹೆಸರಿಸಲಾದ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದ್ದು, ಸಮಯಬದ್ಧವಾಗಿ ಅರ್ಜಿಗಳನ್ನು ವಿಲೇವಾರಿ ಮಾಡಲು ನಿರ್ದೇಶಿಸಲಾಗಿದೆ.

**ವಿಳಂಬ ವಿಲೇವಾರಿ:** ಪ್ರಸ್ತುತ ತಿಂಗಳನಲ್ಲಿ 1,20,479 ಅರ್ಜಿಗಳನ್ನು ವಿಳಂಬವಾಗಿ ವಿಲೇವಾರಿ ಮಾಡಲಾಗಿದ್ದು, ಹಿಂದಿನ ತಿಂಗಳು ಒಟ್ಟು 86,156 ಅರ್ಜಿಗಳು ವಿಳಂಬವಾಗಿ ವಿಲೇವಾರಿಯಾಗಿತ್ತು. ಬಹುತೇಕ (65%) ವಿಳಂಬ ವಿಲೇವಾರಿಯ ಪ್ರಕರಣಗಳು 1-3 ದಿನಗಳ ವಿಳಂಬ ವರ್ಗದಲ್ಲಿ ಇರುತ್ತವೆ. ಈ ತಿಂಗಳು 3.57% ರಷ್ಟು ಪ್ರಕರಣಗಳಲ್ಲಿ ವಿಳಂಬವಿದ್ದರೆ ಕಳೆದ ತಿಂಗಳು 2.15%ರಷ್ಟು ಪ್ರಕರಣಗಳಲ್ಲಿ ವಿಳಂಬವಾಗಿತ್ತು.

ಇದರಲ್ಲಿ ಕಂದಾಯ ಇಲಾಖೆಯು 96,876 ಅರ್ಜಿಗಳ ವಿಳಂಬ ವಿಲೇವಾರಿಯೊಂದಿಗೆ ಶೇಕಡ 80% ರಷ್ಟು ಪಾಲು ಹೊಂದಿದೆ. ಬೆಂಗಳೂರು ನಗರ ಜಿಲ್ಲೆಯು ಅತಿ ಹೆಚ್ಚಿನ (8.87%) ವಿಳಂಬ ವಿಲೇವಾರಿಯನ್ನು ಮತ್ತು ಉತ್ತರ ಕನ್ನಡ ಜಿಲ್ಲೆಯು ಅತಿ ಕಡಿಮೆ (0.31%) ವಿಳಂಬ ವಿಲೇವಾರಿಯನ್ನು ಹೊಂದಿದೆ. ಜಿಲ್ಲಾಡಳಿತದ ಕ್ರಿಯಾಶೀಲ ಪರಾಮರ್ಶೆಯಿಂದ ವಿಳಂಬ ವಿಲೇವಾರಿಯನ್ನು ಮತ್ತಷ್ಟು ನಿಯಂತ್ರಿಸಬಹುದು.

**ತಿರಸ್ಕೃತ ಅರ್ಜಿಗಳು**: :ಪ್ರಸ್ತುತ ತಿಂಗಳನಲ್ಲಿ ತಿರಸ್ಕೃತ ಅರ್ಜಿಗಳ ಪ್ರಮಾಣ 5.43% ಇದ್ದು, ಹಿಂದಿನ ತಿಂಗಳು ತಿರಸ್ಕೃತ ಅರ್ಜಿಗಳ ಪ್ರಮಾಣವು 3.99% ಆಗಿರುತ್ತದೆ. ಬೀದರ್ ಜಿಲ್ಲೆಯು ತಿರಸ್ಕೃತ ಅರ್ಜಿಗಳ ಪ್ರಮಾಣದಲ್ಲಿ (8.91%) ಮೊದಲಿದ್ದು ಸೇವಗಳಾದ **"ಸಂಧ್ಯಾ ಸುರಕ್ಷ"** ಮತ್ತು **"ಎಲ್ಲಾ ತರಹದ ಜಾತಿ ಪ್ರಮಾಣಪತ್ರಗಳು"** ಹೆಚ್ಚಾಗಿ ತಿರಸ್ಕೃತಗೊಂಡಿರುತ್ತವೆ.

ಸೇವೆಗಳಾದ **ಎಲ್ಲಾ ತರಹದ ಜಾತಿ ಪ್ರಮಾಣಪತ್ರಗಳು, ಸಂಧ್ಯಾ ಸುರಕ್ಷ ಮತ್ತು ಅಕುಶಲ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವುದು (ಎಂಜಿಎನ್‌ಆರ್‌ಇಜಿಎಸ್)** ರಾಜ್ಯದಲ್ಲಿ ಹೆಚ್ಚಾಗಿ ತಿರಸ್ಕೃತಗೊಂಡಿರುತ್ತವೆ. ತಿರಸ್ಕೃತ ಅರ್ಜಿಗಳಿಗೆ ಕಾರಣಗಳ ಬಗ್ಗೆ ಸಕಾಲ ಮಿಷನ್ ಮಟ್ಟದಲ್ಲಿ ವಿಶ್ಲೇಶಿಸಿ ಸೂಕ್ತ ಪರಿಹಾರದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅರ್ಜಿಯನ್ನು ವಿಲೇವಾರಿ ಮಾಡಲು ಅಗತ್ಯವಿರುವ ಕಡ್ಡಾಯ ದಾಖಲೆ ಸಲ್ಲಿಕೆಯ ಬಗ್ಗೆ, ಸೇವೆಗಳನ್ನು ಪಡೆಯುವ ಕಾರ್ಯವಿಧಾನದ ಬಗ್ಗೆ, ಮೇಲ್ಮನವಿ ಅವಕಾಶಗಳ ಬಗ್ಗೆ ನಾಗರೀಕರಲ್ಲಿ ಜಾಗೃತಿ ಮೂಡಿಸುವ ಅವಶ್ಯಕತೆಯಿದೆ.

**7 ಮತ್ತು 7ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡಿರುವ ಕಛೇರಿಗಳು**: :ಪ್ರಸ್ತುತ ತಿಂಗಳನಲ್ಲಿ 1,129 ಕಛೇರಿಗಳು 7 ಮತ್ತು 7ಕ್ಕಿಂತ ಹೆಚ್ಚು ಬಾರಿ ವಿಳಂಬ ವಿಲೇವಾರಿ ಮಾಡಿದ್ದು, ಹಿಂದಿನ ತಿಂಗಳನಲ್ಲಿ 7 ಮತ್ತು 7ಕ್ಕಿಂತ ಹೆಚ್ಚು ಬಾರಿ ವಿಳಂಬ ವಿಲೇವಾರಿ ಮಾಡಿದ ಕಛೇರಿಗಳ ಸಂಖ್ಯೆ 1,210 ಆಗಿರುತ್ತದೆ. ಬೆಂಗಳೂರು ನಗರ ಜಿಲ್ಲೆಯೊಂದರಲ್ಲೇ ಈ ಪ್ರವೃತ್ತಿ 168 ಕಛೇರಿಗಳಲ್ಲಿ ಕಂಡಿದ್ದು, ಸದರಿ ಜಿಲ್ಲೆಯು ರಾಜ್ಯದ 13% ರಷ್ಟು ಪಾಲು ಹೊಂದಿದೆ. ಕಂದಾಯ ಇಲಾಖೆಯಲ್ಲಿ ವಿಳಂಬ ಮಾಡಿರುವ 512 ಕಛೇರಿಗಳು ರಾಜ್ಯಾದ್ಯಂತ ಹರಡಿವೆ. **"ಖಾತೆ ಬದಲಾವಣೆ- ವಿವಾದರಹಿತ ಪ್ರಕರಣಗಳು"** ಸೇವೆಯು ರಾಜ್ಯದಲ್ಲಿ ಹೆಚ್ಚಾಗಿ ಭಾಧಿತಗೊಂಡಿರುತ್ತವೆ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ)ಅಧಿನಿಯಮ, 2014 ರಡಿ ಕ್ರಮ ಜರುಗಿಸಲಾಗುವುದು ಮತ್ತು ಕಛೇರಿಗಳ ನಿರಂತರ ತಪಾಸಣೆ ನಡೆಸಲಾಗುತ್ತಿದೆ.

**ದೂರುಗಳು, ಮೇಲ್ಮನವಿಗಳು ಮತ್ತು ಪರಿಹಾರ:**

**ದೂರುಗಳು**: ಸಕಾಲದಡಿ ಸ್ವೀಕರಿಸಲಾಗಿರುವ ಒಟ್ಟು 7,091 ದೂರುಗಳ ಪೈಕಿ 5,655 ದೂರುಗಳನ್ನು ಪರಿಹರಿಸಲಾಗಿದೆ, 335 ದೂರುಗಳನ್ನು ತಿರಸ್ಕರಿಸಲಾಗಿದೆ, ಒಟ್ಟಾರೆ 5,990 ದೂರುಗಳನ್ನು ವಿಲೇವಾರಿ ಮಾಡಲಾಗಿದೆ. 88% ರಷ್ಟು ವಿಲೇವಾರಿ ಪ್ರಮಾಣವನ್ನು ಕಾಣಬಹುದು. 127 ದೂರುಗಳು ವಿಲೇವಾರಿಗಾಗಿ ಪರಿಹಾರದ ಹಂತದಲ್ಲಿವೆ ಹಾಗೂ 884 ದೂರು ಅರ್ಜಿಗಳು ಅವಧಿ ಮೀರಿ ಬಾಕಿ ಉಳಿದಿವೆ. ಸಕಾಲ ಕರೆ ಕೇಂದ್ರವು ಮತ್ತು ಮಿಷನ್‌ನಿಂದ ದೂರುಗಳ ನಿವಾರಣೆಗಾಗಿ ನಿರಂತರ ಪ್ರಯತ್ನ ಮಾಡಲಾಗುತ್ತಿದೆ.

ಒಟ್ಟು 26,408 ಸಕಾಲಕ್ಕೆ ಸಂಬಂಧಿಸದ ದೂರುಗಳ ಪೈಕಿ 11,124 ದೂರುಗಳನ್ನು ಪರಿಹರಿಸಲಾಗಿದೆ. 1,870 ದೂರುಗಳನ್ನು ತಿರಸ್ಕರಿಸಲಾಗಿದೆ, ಒಟ್ಟಾರೆ 12,994 ದೂರುಗಳನ್ನು ವಿಲೇವಾರಿ ಮಾಡಲಾಗಿದೆ. 49 % ರಷ್ಟು ವಿಲೇವಾರಿ ಪ್ರಮಾಣವನ್ನು ಕಾಣಬಹುದು. 524 ದೂರುಗಳು ಪರಿಹಾರದ ಹಂತದಲ್ಲಿವೆ ಹಾಗೂ 12,887 ದೂರುಗಳು ಅವಧಿ ಮೀರಿ ಬಾಕಿ ಉಳಿದಿವೆ.

**ಮೇಲ್ಮನವಿಗಳು**: ಮೇಲ್ಮನವಿ-1ರಡಿ ಒಟ್ಟು 1,317 ಮೇಲ್ಮನವಿಗಳನ್ನು ಸ್ವೀಕರಿಸಲಾಗಿದ್ದು, ಇವುಗಳ ಪೈಕಿ 1,145 ಮೇಲ್ಮನವಿ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ (605 ಮೇಲ್ಮನವಿ ಅರ್ಜಿಗಳನ್ನು ಅನುಮೋದಿಸಲಾಗಿದೆ ಹಾಗೂ 540 ಮೇಲ್ಮನವಿ ಅರ್ಜಿಗಳನ್ನು ತಿರಸ್ಕರಿಸಲಾಗಿದೆ). ಅವಧಿ ಮೀರಿ ಬಾಕಿ ಉಳಿದಿರುವ ಮೇಲ್ಮನವಿ ಅರ್ಜಿಗಳಲ್ಲಿ **"ಕೃಷಿ ಭೂಮಿಯಿಂದ ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆ"** ಮತ್ತು **"ಖಾತೆ ಬದಲಾವಣೆ"** ಸೇವೆಗಳು ಹೆಚ್ಚಾಗಿವೆ.

ಮೇಲ್ಮನವಿ-2 ರಡಿ ಒಟ್ಟು 143 ಮೇಲ್ಮನವಿ ಅರ್ಜಿಗಳನ್ನು ಸ್ವೀಕರಿಸಿದ್ದು, 126 ಮೇಲ್ಮನವಿ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ(64 ಮೇಲ್ಮನವಿ ಅರ್ಜಿಗಳನ್ನು ಅನುಮೋದಿಸಲಾಗಿದೆ ಹಾಗೂ 62 ಮೇಲ್ಮನವಿ ಅರ್ಜಿಗಳನ್ನು ತಿರಸ್ಕರಿಸಲಾಗಿದೆ). ಅವಧಿ ಮೀರಿ ಬಾಕಿ ಉಳಿದಿರುವ ಮೇಲ್ಮನವಿ ಅರ್ಜಿಗಳಲ್ಲಿ **"ಎಲ್ಲಾ ತರಹದ ಜಾತಿ ಪ್ರಮಾಣ ಪತ್ರಗಳು"** ಸೇವೆಗೆ ಸಂಬಂದಿಸಿದ್ದಾಗಿದೆ. ಮೇಲ್ಮನವಿ ಅರ್ಜಿಗಳನ್ನು ವಿಲೇವಾರಿ ಮಾಡಲು ಸಕಾಲ ಮಿಷನ್ ನಿರಂತರವಾಗಿ ಮೇಲ್ವಿಚಾರಣೆ ನೆಡೆಸುತ್ತಿದೆ.

**ಪರಿಹಾರ ಮೊತ್ತ**: ಒಟ್ಟು 632ಪ್ರಕರಣಗಳಲ್ಲಿ ನಾಗರಿಕರಿಗೆ ಪರಿಹಾರ ಧನ ರೂ. 77,560 ಪಾವತಿ ಮಾಡಲಾಗಿರುತ್ತದೆ.

**ಹೊಸ ಸೇವೆಗಳನ್ನು ಸೇರಿಸುವುದು**: ದಿ: 27.08.2015 ರಂದು United nations Dvelopment Program (UNDP) ತಂಡವು ಈ ತಿಂಗಳಿನಲ್ಲಿ ಸಕಾಲ ಯೋಜನೆಯ ಕುರಿತು ಹೆಚ್ಚಿನ ಮಾಹಿತಿ ಪಡೆಯಲು ಸಕಾಲ ಮಿಷನ್‌ಗೆ ಭೇಟಿ ಕೊಟ್ಟಿತು.

ವಿವಿಧ ಇಲಾಖೆಗಳಿಗೆ ಸೇರಿದ ಹೆಚ್ಚು ಹೆಚ್ಚು ಸೇವೆಗಳನ್ನು ಸಕಾಲದಡಿ ಸೇರಿಸಲಾಗುತ್ತಿರುವುದರಿಂದ ರಾಜ್ಯಾದ್ಯಂತ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳು ಅತ್ಯುತ್ಸಾಹದಿಂದ ಸಕಾಲ ಯೋಜನೆಯನ್ನು ಅನುಷ್ಠಾನಗೊಳಿಸುತ್ತಾ ನಾಗರೀಕರಿಗೆ ಯಾವುದೇ ಅಡೆ ತಡೆ ಇಲ್ಲದೆ ಸೇವೆಗಳನ್ನು ನೀಡುವಂತೆ ನಾನು ಒತ್ತಿ ಹೇಳಬಯಸುತ್ತೇನೆ.

**ಎಂ. ಲಕ್ಷ್ಮೀನಾರಾಯಣ, ಭಾ.ಆ.ಸೇ**

**ಮಿಷನ್ ನಿರ್ದೇಶಕರು**

**ಸಕಾಲ**

# ಅಡಕಗಳು


| ಅಧ್ಯಾಯ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1ಅ | ಪ್ರಗತಿ ಶ್ರೇಯಾಂಕ- ಜಿಲ್ಲಾವಾರು | 1 |
| 1ಆ | ಪ್ರಗತಿ ಶ್ರೇಯಾಂಕ- ತಾಲ್ಲೂಕುವಾರು | 2 |
| 1ಇ | ಪ್ರಗತಿ ಶ್ರೇಯಾಂಕ- ವಿಧಾನಸಭಾ ಕ್ಷೇತ್ರವಾರು (ಆಗಸ್ಟ್ 2015) | 3 |
| 2ಅ | ಒಟ್ಟಾರೆ ಪ್ರಗತಿ ವರದಿ – ಜಿಲ್ಲಾವಾರು | 4 |
| 2ಆ | ಒಟ್ಟಾರೆ ಪ್ರಗತಿ ವರದಿ- ಇಲಾಖಾವಾರು | 5 |
| 2ಇ | ಅವಧಿ ಮೀರಿ ಬಾಕಿ- ಇಲಾಖಾ/ಸಂಸ್ಥೆವಾರು | 6 |
| 2ಈ | ವಿಳಂಬ ವಿಲೇವಾರಿ ಪ್ರವೃತ್ತಿ (ಆಗಸ್ಟ್ 2015)- ಜಿಲ್ಲಾವಾರು | 7 |
| 2ಉ | ವಿಳಂಬ ವಿಲೇವಾರಿ ಪ್ರವೃತ್ತಿ (ಆಗಸ್ಟ್ 2015)- ಇಲಾಖಾವಾರು | 8 |
| 2ಊ | ತಿರಸ್ಕೃತ ಅರ್ಜಿಗಳ ಮಾಹಿತಿ (ಆಗಸ್ಟ್ 2015)- ಜಿಲ್ಲಾವಾರು | 9 |
| 2ಋ | ತಿರಸ್ಕೃತ ಅರ್ಜಿಗಳ ಮಾಹಿತಿ (ಆಗಸ್ಟ್ 2015)- ಇಲಾಖಾವಾರು | 10 |
| 2ಎ | 7 ಹಾಗೂ 7ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡಿರುವ ಕಛೇರಿಗಳು (ಆಗಸ್ಟ್ 2015)- ಜಿಲ್ಲಾವಾರು | 11 |
| 2ಏ | 7 ಹಾಗೂ 7ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡಿರುವ ಕಛೇರಿಗಳು (ಆಗಸ್ಟ್ 2015)- ಇಲಾಖಾವಾರು | 12 |
| 2ಐ | ಶೂನ್ಯ ವಿಳಂಬ ಹೊಂದಿರುವ ಕಛೇರಿಗಳು(ಆಗಸ್ಟ್ 2015ರ ಅಂತ್ಯಕ್ಕೆ) | 13 |
| 2ಒ | ಶೂನ್ಯ ಸ್ವೀಕೃತಿ ಹೊಂದಿರುವ ಕಛೇರಿಗಳು(ಆಗಸ್ಟ್ 2015ರ ಅಂತ್ಯಕ್ಕೆ) | 15 |
| 2ಓ | ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಶ್ರೇಯಾಂಕ – ಆಗಸ್ಟ್ 2015 | 17 |
| 3 | ಕರೆ ಕೇಂದ್ರದ ವರದಿ | 18 |
| 3ಅ | ಕರೆಗಳ ವರದಿ( ಆಗಸ್ಟ್ 2015)- ಜಿಲ್ಲಾವಾರು | 19 |
| 3ಆ | ಕರೆಗಳ ವರದಿ( ಆಗಸ್ಟ್ 2015)- ಇಲಾಖಾವಾರು | 20 |
| 3ಇ | ದೂರುಗಳ ಸ್ಥಿತಿಗತಿ(ಆಗಸ್ಟ್ 2015ರ ಅಂತ್ಯಕ್ಕೆ) | 21 |
| 3ಈ | ಪರಿಹಾರ ಧನ ಕೋರಿಕೆಯ ವರದಿ | 22 |
| 3ಉ | ನಾಗರೀಕರ ಮರುಸ್ಪಂದನೆ- ಆಗಸ್ಟ್ 2015 | 23 |
| 4 | ಘಟನೆಗಳು ಮತ್ತು ಪತ್ರಿಕಾ ವರದಿ | 24 |

# ಅಧ್ಯಾಯ 1ಅ: ಪ್ರಗತಿ ಶ್ರೇಯಾಂಕ– ಜಿಲ್ಲಾವಾರು

| ಕ್ರ. ಸಂ. | ಜಿಲ್ಲೆ | ತಿಂಗಳ ಜಿಎಸ್ಸಿಗಳ ಸಂಖ್ಯೆ (ಎ) | ತಿಂಗಳ ವಿಲೇಯಾದ ಜಿಎಸ್ಸಿಗಳ ಸಂಖ್ಯೆ (ಬಿ) | % ಶೇಕಡ ವಿಳಂಬಿತ ವಿಲೇವಾರಿ (ಸಿ) | ವಿಳಂಬಿತ ವಿಲೇವಾರಿ ಶ್ರೇಯಾಂಕ (ಡಿ) | ಒಂದು ಲಕ್ಷದ ಸಂಖ್ಯೆಗನುಗುಣವಾಗಿ ಜಿಎಸ್ಸಿ ರಸೀದಿ ಸಂಖ್ಯೆಗಳು (ಇ) | ಒಂದು ಲಕ್ಷದ ಸಂಖ್ಯೆಗನುಗುಣವಾಗಿ ಜಿಎಸ್ಸಿ ಸ್ವೀಕೃತಿಗಳ ಶ್ರೇಯಾಂಕ (ಈ) | ಅಂತಿಮ ಶ್ರೇಯಾಂಕ (30%ರಷ್ಟು ಪ್ರಾಮುಖ್ಯ (ಡಿ 70% ರಷ್ಟು ಪ್ರಾಮುಖ್ಯ (ಎಫ್) ಆಗಸ್ಟ್ 2015 ತಿಂಗಳ ಶ್ರೇಯಾಂಕ | ಜುಲೈ ತಿಂಗಳ ಶ್ರೇಯಾಂಕ | ಪ್ರವೃತ್ತಿ |
|---|---|---|---|---|---|---|---|---|---|---|
| 1 | ಚಿಕ್ಕಬಳ್ಳಾಪುರ | 82869 | 98025 | 0.4 | 2 | 6905 | 1 | **1** | 1 | ↔ |
| 2 | ತುಮಕೂರು | 160270 | 165876 | 0.7 | 5 | 6164 | 2 | **2** | 3 | ↑ |
| 3 | ಉಡುಪಿ | 65917 | 71378 | 0.4 | 2 | 5992 | 4 | **3** | 4 | ↑ |
| 4 | ಬಾಗಲಕೋಟೆ | 105220 | 120996 | 2.4 | 13 | 5845 | 6 | **4** | 2 | ↓ |
| 5 | ಬೆಂಗಳೂರು ಗ್ರಾಮಾಂತರ | 52263 | 57747 | 2.8 | 15 | 5807 | 7 | **5** | 6 | ↑ |
| 6 | ಕೋಲಾರ | 91073 | 101796 | 4.4 | 26 | 6071 | 3 | **6** | 9 | ↑ |
| 7 | ಉತ್ತರ ಕನ್ನಡ | 70575 | 69236 | 0.3 | 1 | 5041 | 14 | **7** | 20 | ↑ |
| 8 | ರಾಯಚೂರು | 105878 | 121334 | 3.1 | 17 | 5572 | 8 | **8** | 18 | ↑ |
| 9 | ಕೊಡಗು | 27099 | 32514 | 2.8 | 15 | 5419 | 9 | **9** | 24 | ↑ |
| 10 | ವಿಜಯಾಪುರ | 124917 | 148032 | 6.9 | 29 | 5948 | 5 | **10** | 10 | ↔ |
| 11 | ಬೆಳಗಾವಿ | 226006 | 274667 | 1.4 | 7 | 4808 | 16 | **11** | 12 | ↑ |
| 12 | ಚಿಕ್ಕಮಗಳೂರು | 56813 | 64298 | 3.3 | 19 | 5164 | 11 | **12** | 26 | ↑ |
| 13 | ಮಂಡ್ಯ | 93799 | 109547 | 3.9 | 22 | 5211 | 10 | **13** | 7 | ↓ |
| 14 | ಬೀದರ್ | 86951 | 101784 | 4.3 | 25 | 5114 | 12 | **14** | 22 | ↑ |
| 15 | ಯಾದಗಿರಿ | 55685 | 68361 | 4 | 24 | 5062 | 13 | **15** | 15 | ↔ |
| 16 | ಚಿತ್ರದುರ್ಗ | 75964 | 89460 | 1.7 | 9 | 4747 | 20 | **16** | 14 | ↓ |
| 17 | ರಾಮನಗರ | 48968 | 54701 | 3.7 | 21 | 4896 | 15 | **17** | 19 | ↑ |
| 18 | ದಕ್ಷಿಣ ಕನ್ನಡ | 96060 | 110076 | 3.1 | 17 | 4803 | 17 | **18** | 28 | ↑ |
| 19 | ಹಾಸನ | 78664 | 84830 | 1.9 | 11 | 4627 | 21 | **19** | 8 | ↓ |
| 20 | ಕಲಬುರಗಿ | 114517 | 164012 | 1.6 | 8 | 4580 | 23 | **20** | 5 | ↓ |
| 21 | ಶಿವಮೊಗ್ಗ | 81306 | 92052 | 3.4 | 20 | 4782 | 18 | **21** | 21 | ↔ |
| 22 | ಹಾವೇರಿ | 68860 | 94227 | 2.5 | 14 | 4590 | 22 | **22** | 16 | ↓ |
| 23 | ಚಾಮರಾಜ ನಗರ | 41380 | 47242 | 0.9 | 6 | 4138 | 27 | **23** | 13 | ↓ |
| 24 | ದಾವಣಗೆರೆ | 78334 | 98464 | 0.6 | 4 | 4122 | 28 | **24** | 25 | ↑ |
| 25 | ಗದಗ | 45412 | 58427 | 2.1 | 12 | 4541 | 25 | **25** | 11 | ↓ |
| 26 | ಕೊಪ್ಪಳ | 62017 | 73573 | 5.7 | 27 | 4770 | 19 | **26** | 17 | ↓ |
| 27 | ಬಳ್ಳಾರಿ | 114191 | 141796 | 3.9 | 22 | 4567 | 24 | **27** | 23 | ↓ |
| 28 | ಧಾರವಾಡ | 72013 | 85073 | 1.7 | 9 | 4000 | 30 | **28** | 27 | ↓ |
| 29 | ಮೈಸೂರು | 122438 | 153813 | 6.3 | 28 | 4222 | 26 | **29** | 29 | ↔ |
| 30 | ಬೆಂಗಳೂರು | 384581 | 418603 | 8.9 | 30 | 4048 | 29 | **30** | 30 | ↔ |

**31/08/2015 ರಂದು 12:00:00 ರಂದು ದಾಖಲೆಗಳಂತೆ**

**ಟಿಪ್ಪಣಿ**

↔ : **ಕಳೆದ ತಿಂಗಳನಂತೆ**

↑: **ಏರಿರುವುದು**

↓: **ಇಳಿಮುಖ**

# ಅಧ್ಯಾಯ 1ಆ: ಪ್ರಗತಿ ಶ್ರೇಯಾಂಕ– ತಾಲ್ಲೂಕುವಾರು

ಮೊದಲ 10 ಶ್ರೇಯಾಂಕ ಪಡೆದಿರುವ ತಾಲ್ಲೂಕುಗಳ ಪಟ್ಟಿ

| ಕ್ರ.ಸ. | ಜಿಲ್ಲೆ | ತಾಲ್ಲೂಕು | ತಿಂಗಳನಲ್ಲಿ ಸ್ವೀಕರಿಸಲಾದ ಅರ್ಜಿಗಳು (ಎ) | ತಿಂಗಳನಲ್ಲಿ ವಿಲೇವಾರಿ ಯಾದ ಅರ್ಜಿಗಳು (ಬಿ) | ತಿಂಗಳನಲ್ಲಿ ವಿಳಂಬವಾಗಿ ವಿಲೇವಾರಿ ಮಾಡಿದ ಅರ್ಜಿಗಳ ಶೇಕಡಾವಾರು ಪ್ರಮಾಣ (ಸಿ) | ವಿಳಂಬವಾಗಿ ವಿಲೇವಾರಿ ಮಾಡಿದ ಅರ್ಜಿಗಳ ಶೇಕಡಾ ವಾರು ಶ್ರೇಣಿವಾರು (ಡಿ) | ಸ್ವೀಕೃತಿಗಳು 10 ಸಾವಿರ ಜನಸಂಖ್ಯಾ ಪ್ರದೇಶ (ಇ) | ಶ್ರೇಣಿವಾರು 10 ಸಾವಿರ ಜನಸಂಖ್ಯಾ ಪ್ರದೇಶ (ಎಫ್) | ಅಂತಿಮ ಶ್ರೇಯಾಂಕ (30%ರಷ್ಟು ಪ್ರಾಮುಖ್ಯ (ಡಿ) 70%ರಷ್ಟು ಪ್ರಾಮುಖ್ಯ (ಎಫ) |
|---|---|---|---|---|---|---|---|---|---|
| 1 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 29552 | 32072 | 0.2 | 14 | 1407 | 5 | 1 |
| 2 | ಉತ್ತರ ಕನ್ನಡ | ಕುಮಟಾ | 11330 | 11248 | 0.1 | 7 | 755 | 14 | 2 |
| 3 | ಉತ್ತರ ಕನ್ನಡ | ಕಾರವಾರ | 14560 | 11744 | 0.6 | 38 | 970 | 8 | 3 |
| 4 | ಉತ್ತರ ಕನ್ನಡ | ಹಳಿಯಾಳ | 7051 | 7134 | 0 | 2 | 641 | 28 | 4 |
| 5 | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ | 16049 | 17281 | 0.7 | 41 | 802 | 12 | 5 |
| 6 | ತುಮಕೂರು | ತುಮಕೂರು | 50269 | 52860 | 1 | 55 | 852 | 9 | 6 |
| 7 | ತುಮಕೂರು | ತಿಪಟೂರ | 15297 | 15267 | 0.4 | 28 | 695 | 21 | 7 |
| 8 | ತುಮಕೂರು | ಕೊರಟಗೇರೆ | 10616 | 10737 | 0.3 | 19 | 663 | 25 | 8 |
| 9 | ಧಾರವಾಡ | ಧಾರವಾಡ | 32085 | 35042 | 1.3 | 68 | 1336 | 6 | 9 |
| 10 | ಉಡುಪಿ | ಕುಂದಾಪುರ | 27005 | 28530 | 0.5 | 35 | 692 | 22 | 10 |

**31/08/2015 ರಂದು 12:00:00 ರಂದು ದಾಖಲೆಗಳಂತೆ**

**ಟಿಪ್ಪಣಿ:** ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕು ಮೊದಲ ಶ್ರೇಯಾಂಕ ಗಳಸಿದೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ತಾಲ್ಲೂಕು ಎರಡನೇ ಶ್ರೇಯಾಂಕ ಗಳಸಿದೆ.

**ಕೊನೆಯ 10 ಶ್ರೇಯಾಂಕ ಪಡೆದಿರುವ ತಾಲ್ಲೂಕುಗಳ ಪಟ್ಟಿ**

| ಕ್ರ.ಸ. | ಜಿಲ್ಲೆ | ತಾಲ್ಲೂಕು | ತಿಂಗಳನಲ್ಲಿ ಸ್ವೀಕರಿಸಲಾದ ಅರ್ಜಿಗಳು (ಎ) | ತಿಂಗಳನಲ್ಲಿ ವಿಲೇವಾರಿ ಯಾದ ಅರ್ಜಿಗಳು (ಬಿ) | ತಿಂಗಳನಲ್ಲಿ ವಿಳಂಬವಾಗಿ ವಿಲೇವಾರಿ ಮಾಡಿದ ಅರ್ಜಿಗಳ ಶೇಕಡಾವಾರು ಪ್ರಮಾಣ (ಸಿ) | ವಿಳಂಬವಾಗಿ ವಿಲೇವಾರಿ ಮಾಡಿದ ಅರ್ಜಿಗಳ ಶೇಕಡಾ ವಾರು ಶ್ರೇಣಿವಾರು (ಡಿ) | ಸ್ವೀಕೃತಿಗಳು 10 ಸಾವಿರ ಜನಸಂಖ್ಯಾ ಪ್ರದೇಶ (ಇ) | ಶ್ರೇಣಿವಾರು 10 ಸಾವಿರ ಜನಸಂಖ್ಯಾ ಪ್ರದೇಶ (ಎಫ್) | ಅಂತಿಮ ಶ್ರೇಯಾಂಕ (30%ರಷ್ಟು ಪ್ರಾಮುಖ್ಯ (ಡಿ) 70%ರಷ್ಟು ಪ್ರಾಮುಖ್ಯ (ಎಫ) |
|---|---|---|---|---|---|---|---|---|---|
| 1 | ಧಾರವಾಡ | ಕಲಘಟಗಿ | 4884 | 5626 | 4.7 | 141 | 325 | 156 | 168 |
| 2 | ಹಾಸನ | ಚನ್ನರಾಯಪಟ್ಟಣ | 8141 | 8233 | 3.1 | 117 | 301 | 167 | 169 |
| 3 | ಬೆಳಗಾವಿ | ಸವದತ್ತಿ | 11723 | 18937 | 6 | 150 | 334 | 153 | 170 |
| 4 | ಚಿಕ್ಕಮಗಳೂರು | ನರಸಿಂಹರಾಜಪುರ | 1989 | 2179 | 6.2 | 153 | 331 | 154 | 171 |
| 5 | ಮೈಸೂರು | ನಂಜನಗೂಡು | 9711 | 13000 | 4.3 | 139 | 255 | 174 | 172 |
| 6 | ಶಿವಮೊಗ್ಗ | ಸೊರಬ | 6164 | 9342 | 11 | 171 | 308 | 163 | 173 |
| 7 | ಹಾಸನ | ಅಲೂರು | 2432 | 3555 | 12.3 | 174 | 304 | 164 | 174 |
| 8 | ಕೊಪ್ಪಳ | ಯಲ್ಬುರ್ಗ | 7893 | 11008 | 11.7 | 172 | 303 | 165 | 175 |
| 9 | ಉತ್ತರ ಕನ್ನಡ | ಜೊಯ್ಡಾ(ಸುಪಾ) | 1146 | 1390 | 6.1 | 152 | 229 | 177 | 176 |
| 10 | ಬೆಂಗಳೂರು | ಯಲಹಂಕ | 14356 | 22902 | 40.4 | 177 | 287 | 169 | 177 |

**31/08/2015 ರಂದು 12:00:00 ರಂದು ದಾಖಲೆಗಳಂತೆ**

**ಟಿಪ್ಪಣಿ:** ಕೊನೆಯ ಶ್ರೇಯಾಂಕದ ತಾಲ್ಲೂಕುಗಳು ರಾಜ್ಯಾದ್ಯಂತ ಹರಡಿವೆ. ಈ ತಾಲ್ಲೂಕುಗಳಲ್ಲಿ ಸ್ವೀಕೃತಿ ಅರ್ಜಿಗಳ ಪ್ರಮಾಣವು ಕಡಿಮೆ ಇದ್ದು ವಿಳಂಬ ವಿಲೇವಾರಿ ಪ್ರಮಾಣವು ಹೆಚ್ಚಾಗಿರುತ್ತದೆ.

# ಅಧ್ಯಾಯ 1ಇ: ಪ್ರಗತಿ ಶ್ರೇಯಾಂಕ–ವಿಧಾನಸಭಾ ಕ್ಷೇತ್ರವಾರು ಆಗಸ್ಟ್ 2015 (ಮೊದಲ 25)

| ಕ್ರ.ಸ. | ವಿಧಾನ ಸಭಾ ಕ್ಷೇತ್ರ | ಮಾಹೆಯಲ್ಲಿ ಸ್ವೀಕರಿಸ ಲಾದ ಅರ್ಜಿಗಳು (ಎ) | ಮಾಹೆಯಲ್ಲಿ ವಿಲೇವಾರಿ ಯಾದ ಅರ್ಜಿಗಳು (ಬಿ) | ಮಾಹೆಯಲ್ಲಿ ವಿಳಂಬವಾಗಿ ವಿಲೇವಾರಿ ಮಾಡಿದ ಅರ್ಜಿಗಳ ಶೇಕಡಾವಾರು ಪ್ರಮಾಣ (ಸಿ) | ವಿಳಂಬವಾಗಿ ವಿಲೇವಾರಿ ಮಾಡಿದ ಅರ್ಜಿಗಳ ಶೇಕಡಾ ವಾರು ಶ್ರೇಣಿವಾರು (ಡಿ) | ಸ್ವೀಕೃತಿಗಳು ಒಂದು ಲಕ್ಷ ಜನಸಂಖ್ಯಾ ಪ್ರದೇಶ (ಇ) | ಶ್ರೇಣಿವಾರು ಒಂದು ಲಕ್ಷ ಜನಸಂಖ್ಯಾ ಪ್ರದೇಶ (ಎಫ್) | ಅಂತಿಮ ಶ್ರೇಯಾಂಕ (30%ರಷ್ಟು ಪ್ರಾಮುಖ್ಯ (ಡಿ) 70%ರಷ್ಟು ಪ್ರಾಮುಖ್ಯ (ಎಫ) |
|---|---|---|---|---|---|---|---|---|
| 1 | ಉಡುಪಿ | 30332 | 33254 | 0.3 | 23 | 1213 | 7 | 1 |
| 2 | ಚಾಮರಾಜಪೇಟೆ | 27982 | 27779 | 0.2 | 12 | 1036 | 12 | 2 |
| 3 | ಚಿಕ್ಕಬಳ್ಳಾಪುರ | 30381 | 32873 | 0.3 | 23 | 1168 | 8 | 3 |
| 4 | ಗೋಕಾಕ | 28936 | 29852 | 0.2 | 12 | 933 | 16 | 4 |
| 5 | ಗಾಂಧಿನಗರ | 42004 | 41832 | 0.7 | 51 | 1500 | 2 | 5 |
| 6 | ಕುಮಟಾ | 18037 | 18338 | 0 | 1 | 819 | 26 | 6 |
| 7 | ಗುಲಬರ್ಗಾ ದಕ್ಷಿಣ | 38720 | 56062 | 1 | 71 | 1290 | 6 | 7 |
| 8 | ಚಿಕ್ಕೋಡಿ-ಸದಲಗಾ | 28888 | 29585 | 0.8 | 60 | 1069 | 11 | 8 |
| 9 | ತುಮಕೂರು ನಗರ | 41689 | 43982 | 1.1 | 75 | 1389 | 5 | 9 |
| 10 | ಪುತ್ತೂರು | 21512 | 22019 | 0.4 | 36 | 827 | 24 | 10 |
| 11 | ವಿಜಾಪೂರ ನಗರ | 43848 | 50509 | 1.6 | 103 | 1461 | 3 | 11 |
| 12 | ಹಾಸನ | 23902 | 23641 | 0.9 | 68 | 919 | 18 | 12 |
| 13 | ಕಾರವಾರ | 20637 | 15779 | 0.6 | 47 | 793 | 28 | 13 |
| 14 | ಮಂಡ್ಯ | 26817 | 27354 | 1.3 | 85 | 993 | 14 | 14 |
| 15 | ದಾವಣಗೆರೆ ಉತ್ತರ | 18118 | 18418 | 0.1 | 6 | 647 | 48 | 15 |
| 16 | ರಾಯಚೂರು | 27893 | 30619 | 1.7 | 109 | 1072 | 10 | 16 |
| 17 | ಅಥಣಿ | 25505 | 28950 | 1.3 | 85 | 879 | 22 | 17 |
| 18 | ತಿಪಟೂರು | 15297 | 15267 | 0.4 | 36 | 695 | 43 | 18 |
| 19 | ಹುಕ್ಕೇರಿ | 15647 | 19714 | 0.2 | 12 | 601 | 55 | 19 |
| 20 | ಬಿ.ಟಿ.ಎಂ ಲೇಔಟ್ | 24877 | 24662 | 0.5 | 41 | 691 | 44 | 20 |
| 21 | ಕೋಲಾರ | 31693 | 35505 | 2 | 124 | 1131 | 9 | 21 |
| 22 | ಕುಂದಾಪುರ | 16572 | 17624 | 0.8 | 60 | 720 | 37 | 22 |
| 23 | ಚಾಮರಾಜನಗರ | 14738 | 15818 | 0.3 | 23 | 589 | 59 | 23 |
| 24 | ಹುನಗುಂದ | 23067 | 24055 | 1.6 | 103 | 823 | 25 | 24 |
| 25 | ಚಿತ್ರದುರ್ಗ | 20951 | 25141 | 0.9 | 68 | 698 | 42 | 25 |

**31/08/2015 ರಂದು 12:00:00 ರಂದು ದಾಖಲೆಗಳಂತೆ**

# ಅಧ್ಯಾಯ 2ಅ: ಒಟ್ಟಾರೆ ಪ್ರಗತಿ ವರದಿ– ಜಿಲ್ಲಾವಾರು

| ಜಿಲ್ಲೆ | ಅರ್ಜಿ ಸಂಖ್ಯೆ | | | | ಅಪೀಲು – 1 ಸ್ಥಿತಿ | | | | ಅಪೀಲು –2 ಸ್ಥಿತಿ | | | | ಅವಧಿ ಮೀರಿ ಬಾಕಿ |
|---|---|---|---|---|---|---|---|---|---|---|---|---|---|
| | ಒಟ್ಟಾರೆ ಸ್ವೀಕೃತಿ | ವಿಲೇವಾರಿ | ಅನುಮೋದನೆ | ತಿರಸ್ಕೃತಗಳ ಸಂಖ್ಯೆ | ಒಟ್ಟಾರೆ ಸ್ವೀಕೃತಿ | ವಿಲೇವಾರಿ | ಅನುಮೋದನೆ | ತಿರಸ್ಕೃತಗಳ ಸಂಖ್ಯೆ | ಒಟ್ಟಾರೆ ಸ್ವೀಕೃತಿ | ವಿಲೇವಾರಿ | ಅನುಮೋದನೆ | ತಿರಸ್ಕೃತಗಳ ಸಂಖ್ಯೆ | |
| ಬೆಂಗಳೂರು | 15022299 | 14920227 | 13963573 | 954756 | 387 | 280 | 236 | 44 | 9 | 7 | 5 | 2 | 12983 |
| ದಕ್ಷಿಣ ಕನ್ನಡ | 3007623 | 2981069 | 2871587 | 108910 | 8 | 7 | 3 | 4 | 0 | 0 | 0 | 0 | 3023 |
| ಮೈಸೂರು | 4318891 | 4283659 | 4085199 | 197916 | 42 | 40 | 22 | 18 | 0 | 0 | 0 | 0 | 1899 |
| ತುಮಕೂರು | 4395195 | 4352304 | 4084279 | 266439 | 39 | 36 | 29 | 7 | 1 | 0 | 0 | 0 | 1499 |
| ಮಂಡ್ಯ | 3206348 | 3179341 | 2983410 | 195557 | 23 | 16 | 8 | 8 | 1 | 1 | 1 | 0 | 1094 |
| ಬೆಳಗಾವಿ | 5885160 | 5829365 | 5509439 | 319510 | 64 | 56 | 33 | 23 | 2 | 0 | 0 | 0 | 1033 |
| ರಾಯಚೂರು | 2660105 | 2628574 | 2484263 | 143908 | 109 | 109 | 54 | 55 | 54 | 54 | 54 | 0 | 834 |
| ವಿಜಯಾಪುರ | 2896197 | 2860284 | 2700958 | 158997 | 26 | 24 | 7 | 17 | 1 | 1 | 0 | 1 | 711 |
| ಚಿಕ್ಕಮಗಳೂರು | 1683280 | 1667578 | 1531447 | 135814 | 13 | 10 | 4 | 6 | 2 | 2 | 2 | 0 | 545 |
| ಗದಗ | 1569883 | 1556826 | 1496345 | 60373 | 8 | 8 | 5 | 3 | 0 | 0 | 0 | 0 | 543 |
| ಬೀದರ್ | 2141786 | 2104329 | 1895056 | 208883 | 54 | 52 | 13 | 39 | 2 | 2 | 0 | 2 | 523 |
| ಬಳ್ಳಾರಿ | 3299613 | 3261100 | 3099487 | 161267 | 61 | 53 | 27 | 26 | 6 | 5 | 0 | 5 | 505 |
| ರಾಮನಗರ | 1782896 | 1767060 | 1693748 | 73059 | 9 | 6 | 3 | 3 | 0 | 0 | 0 | 0 | 449 |
| ಕೊಪ್ಪಳ | 1932819 | 1912505 | 1832357 | 79912 | 6 | 4 | 1 | 3 | 0 | 0 | 0 | 0 | 422 |
| ಕಲಬುರಗಿ | 3202380 | 3166027 | 3005101 | 160821 | 60 | 59 | 29 | 30 | 4 | 4 | 1 | 3 | 421 |
| ಶಿವಮೊಗ್ಗ | 2450237 | 2429102 | 2274407 | 154374 | 18 | 9 | 6 | 3 | 0 | 0 | 0 | 0 | 380 |
| ಕೋಲಾರ | 2455268 | 2432268 | 2297446 | 134239 | 39 | 37 | 19 | 18 | 3 | 3 | 0 | 3 | 369 |
| ಬಾಗಲಕೋಟೆ | 2583556 | 2562271 | 2457328 | 104160 | 19 | 19 | 2 | 17 | 2 | 2 | 0 | 2 | 338 |
| ಧಾರವಾಡ | 2639311 | 2621087 | 2499123 | 121761 | 29 | 28 | 1 | 27 | 18 | 18 | 0 | 18 | 297 |
| ಉಡುಪಿ | 1689289 | 1672544 | 1627572 | 44422 | 15 | 15 | 12 | 3 | 1 | 1 | 1 | 0 | 250 |
| ಹಾಸನ | 3034203 | 3009711 | 2826227 | 183120 | 24 | 22 | 10 | 12 | 0 | 0 | 0 | 0 | 219 |
| ಚಿತ್ರದುರ್ಗ | 2388789 | 2362389 | 2235918 | 126265 | 19 | 19 | 7 | 12 | 0 | 0 | 0 | 0 | 177 |
| ಬೆಂಗಳೂರು ಗ್ರಾಮಾಂತರ | 1504987 | 1491058 | 1411381 | 79314 | 23 | 20 | 19 | 1 | 0 | 0 | 0 | 0 | 157 |
| ಕೊಡಗು | 745289 | 738322 | 700619 | 37629 | 3 | 3 | 1 | 2 | 0 | 0 | 0 | 0 | 149 |
| ಚಾಮರಾಜ ನಗರ | 1478279 | 1463251 | 1390465 | 72575 | 20 | 20 | 14 | 6 | 0 | 0 | 0 | 0 | 145 |
| ಚಿಕ್ಕಬಳ್ಳಾಪುರ | 2262139 | 2226704 | 2096235 | 129704 | 23 | 20 | 7 | 13 | 0 | 0 | 0 | 0 | 131 |
| ಹಾವೇರಿ | 2050162 | 2027334 | 1916394 | 110492 | 10 | 10 | 4 | 6 | 0 | 0 | 0 | 0 | 107 |
| ಯಾದಗಿರಿ | 1398454 | 1377384 | 1313720 | 63432 | 16 | 16 | 7 | 9 | 1 | 1 | 0 | 1 | 78 |
| ದಾವಣಗೆರೆ | 2678251 | 2655397 | 2497023 | 158142 | 134 | 131 | 12 | 119 | 35 | 24 | 0 | 24 | 24 |
| ಉತ್ತರ ಕನ್ನಡ | 2196749 | 2172919 | 2106021 | 66476 | 16 | 16 | 10 | 6 | 1 | 1 | 0 | 1 | 20 |
| **ಒಟ್ಟು:** | **88559438** | **87711989** | **82886128** | **4812227** | **1317** | **1145** | **605** | **540** | **143** | **126** | **64** | **62** | **29325** |

**31/08/2015 ರಂದು 12:00:00 ರಂದು ದಾಖಲೆಗಳಂತೆ**

# ಅಧ್ಯಾಯ 2ಆ: ಒಟ್ಟಾರೆ ಪ್ರಗತಿ ವರದಿ– ಇಲಾಖಾವಾರು

| ಇಲಾಖೆ | ಅರ್ಜಿ ಸಂಖ್ಯೆ | | | | ಅಪೀಲು – 1 ಸ್ಥಿತಿ | | | | ಅಪೀಲು –2 ಸ್ಥಿತಿ | | | | ಅವಧಿ ಮೀರಿ ಬಾಕಿ |
|---|---|---|---|---|---|---|---|---|---|---|---|---|---|
| | ಒಟ್ಟಾರೆ ಸ್ವೀಕೃತಿ | ವಿಲೇವಾರಿ | ಅನುಮೋದನೆ | ತಿರಸ್ಕೃತಗಳ ಸಂಖ್ಯೆ | ಒಟ್ಟಾರೆ ಸ್ವೀಕೃತಿ | ವಿಲೇವಾರಿ | ಅನುಮೋದನೆ | ತಿರಸ್ಕೃತಗಳ ಸಂಖ್ಯೆ | ಒಟ್ಟಾರೆ ಸ್ವೀಕೃತಿ | ವಿಲೇವಾರಿ | ಅನುಮೋದನೆ | ತಿರಸ್ಕೃತಗಳ ಸಂಖ್ಯೆ | |
| ಕಂದಾಯ ಇಲಾಖೆ | 48863432 | 48208578 | 44792014 | 3413841 | 1095 | 974 | 501 | 473 | 130 | 116 | 60 | 56 | 10272 |
| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 3654041 | 3625195 | 3516572 | 104611 | 85 | 74 | 47 | 27 | 6 | 4 | 2 | 2 | 5947 |
| ಸಾರಿಗೆ ಇಲಾಖೆ | 15954335 | 15877820 | 15524175 | 351775 | 7 | 3 | 1 | 2 | 0 | 0 | 0 | 0 | 5695 |
| ಒಳಾಡಳಿತ ಇಲಾಖೆ | 3641752 | 3596189 | 3522399 | 72876 | 15 | 5 | 1 | 4 | 0 | 0 | 0 | 0 | 4257 |
| ಶಿಕ್ಷಣ ಇಲಾಖೆ | 584509 | 575527 | 546589 | 28702 | 47 | 34 | 8 | 26 | 3 | 3 | 0 | 3 | 2201 |
| ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ (ಪರಿಸರ) | 4864 | 4265 | 3476 | 785 | 0 | 0 | 0 | 0 | 0 | 0 | 0 | 0 | 236 |
| ನಗರಾಭಿವೃದ್ಧಿ ಇಲಾಖೆ | 3018520 | 3005039 | 2860988 | 142663 | 58 | 48 | 43 | 5 | 3 | 2 | 2 | 0 | 208 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 907653 | 905653 | 894797 | 10527 | 0 | 0 | 0 | 0 | 0 | 0 | 0 | 0 | 172 |
| ಮಹಿಳಾ ಮತ್ತು ಮಕ್ಕಳ ಕಲ್ಯಾಣ | 812670 | 811208 | 810199 | 746 | 0 | 0 | 0 | 0 | 0 | 0 | 0 | 0 | 69 |
| ಕಾರ್ಮಿಕ ಇಲಾಖೆ | 603317 | 598984 | 590175 | 8655 | 0 | 0 | 0 | 0 | 0 | 0 | 0 | 0 | 53 |
| ವಾಣಿಜ್ಯ ತೆರಿಗೆ ಇಲಾಖೆ | 6558204 | 6550455 | 5927952 | 621130 | 6 | 5 | 2 | 3 | 0 | 0 | 0 | 0 | 49 |
| ಸಹಕಾರ ಇಲಾಖೆ | 47539 | 46715 | 45134 | 1556 | 0 | 0 | 0 | 0 | 0 | 0 | 0 | 0 | 42 |
| ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ | 3709894 | 3709296 | 3663178 | 45804 | 2 | 2 | 2 | 0 | 1 | 1 | 0 | 1 | 32 |
| ತೋಟಗಾರಿಕೆ ಇಲಾಖೆ | 24588 | 23564 | 23181 | 383 | 0 | 0 | 0 | 0 | 0 | 0 | 0 | 0 | 31 |
| ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ | 7942 | 7562 | 7134 | 422 | 0 | 0 | 0 | 0 | 0 | 0 | 0 | 0 | 18 |
| ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ | 1151 | 1134 | 1134 | 0 | 0 | 0 | 0 | 0 | 0 | 0 | 0 | 0 | 16 |
| ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ | 1192 | 1181 | 1111 | 68 | 0 | 0 | 0 | 0 | 0 | 0 | 0 | 0 | 8 |
| ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 2946 | 2920 | 2124 | 796 | 0 | 0 | 0 | 0 | 0 | 0 | 0 | 0 | 7 |
| ವಸತಿ ಇಲಾಖೆ | 8521 | 8419 | 8269 | 149 | 0 | 0 | 0 | 0 | 0 | 0 | 0 | 0 | 7 |
| ಯುವ ಸಬಲೀಕರಣ ಮತ್ತು ಕ್ರೀಡೆ ಇಲಾಖೆ | 383 | 377 | 374 | 3 | 0 | 0 | 0 | 0 | 0 | 0 | 0 | 0 | 5 |
| ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | 151985 | 151908 | 145153 | 6735 | 2 | 0 | 0 | 0 | 0 | 0 | 0 | 0 | 0 |
| ಜಲ ಸಂಪನ್ಮೂಲ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| **ಒಟ್ಟು:** | **88559438** | **87711989** | **82886128** | **4812227** | **1317** | **1145** | **605** | **540** | **143** | **126** | **64** | **62** | **29325** |

**31/08/2015 ರಂದು 12:00:00 ರಂದು ದಾಖಲೆಗಳಂತೆ**

# ಅಧ್ಯಾಯ 2ಇ: ಅವಧಿ ಮೀರಿ ಬಾಕಿ – ಇಲಾಖಾ/ಸಂಸ್ಥೆವಾರು

| ಕ್ರ.ಸಂ. | ಇಲಾಖೆ | ಒಟ್ಟಾರೆ ಜಿಎಸ್ ಸಿ ರಸೀದಿಗಳ ಸಂಖ್ಯೆ | ಒಟ್ಟಾರೆ ವಿಲೇವಾರಿಯಾದ ರಸೀದಿಗಳ ಸಂಖ್ಯೆ | ನಿಗದಿ ಪಡಿಸಿದ ದಿನಾಂಕದ ನಂತರ ಬಾಕಿ ಇರುವ ಸಂಖ್ಯೆ |
|---|---|---|---|---|
| 1 | ಕಂದಾಯ ಇಲಾಖೆ | 42106417 | 41468140 | 8756 |
| 2 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 3654041 | 3625195 | 5947 |
| 3 | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ | 1387621 | 1381847 | 4324 |
| 4 | ಒಳಾಡಳಿತ ಇಲಾಖೆ | 3630763 | 3585586 | 4257 |
| 5 | ಸಾರ್ವಜನಿಕ ಶಿಕ್ಷಣ ಇಲಾಖೆ | 248778 | 241566 | 1550 |
| 6 | ಸಾರಿಗೆ ಇಲಾಖೆ | 11672169 | 11605938 | 1123 |
| 7 | ನೋಂದಣಿ ಮತ್ತು ಮುದ್ರಾಂಕ ಇಲಾಖೆ | 5154670 | 5151893 | 1117 |
| 8 | ಪದವಿ ಪೂರ್ವ ಶಿಕ್ಷಣ ಇಲಾಖೆ | 138413 | 138000 | 413 |
| 9 | ಭೂಮಾಪನ ಮತ್ತು ಭೂಕಂದಾಯ ಇಲಾಖೆ | 1602249 | 1588508 | 399 |
| 10 | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ | 4610 | 4057 | 236 |
| 11 | ಸಾರಿಗೆ ಸಂಸ್ಥೆಗಳು (ಕ.ರಾ.ರ.ಸಾ.ಸಂ ) | 1825400 | 1822598 | 197 |
| 12 | ಆಯುಕ್ತಾಲಯ ಬೆಂಗಳೂರು ಮತ್ತು ಮೈಸೂರು, ಸಾ.ಶಿ.ಇ | 2201 | 2063 | 138 |
| 13 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 870493 | 868778 | 101 |
| 14 | ಸ್ಥಳೀಯ ಪ್ರಾಧಿಕಾರ /ಸಾರ್ವಜನಿಕ ಪ್ರಾಧಿಕಾರ:ಪುರ ಸಭೆಗಳು | 794820 | 791704 | 74 |
| 15 | ಔಷಧಗಳ ನಿಯಂತ್ರಣ ಇಲಾಖೆ | 33703 | 33433 | 70 |
| 16 | ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗ | 116586 | 115980 | 62 |
| 17 | ವಾಣಿಜ್ಯ ತೆರಿಗೆ ಇಲಾಖೆ | 6554171 | 6546482 | 49 |
| 18 | ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ | 667084 | 666570 | 49 |
| 19 | ಕಾರ್ಮಿಕ ಇಲಾಖೆ | 564110 | 560966 | 43 |
| 20 | ಸ್ಥಳೀಯ ಪ್ರಾಧಿಕಾರ /ಸಾರ್ವಜನಿಕ ಪ್ರಾಧಿಕಾರ:ಪಟ್ಟಣ ಪಂಚಾಯತ್ ಗಳು | 271236 | 270028 | 42 |
| 21 | ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ | 446293 | 444962 | 40 |
| 22 | ಸ್ಥಳೀಯ ಪ್ರಾಧಿಕಾರ /ಸಾರ್ವಜನಿಕ ಪ್ರಾಧಿಕಾರ:ನಗರ ಸಭೆಗಳು | 1126686 | 1121313 | 35 |
| 23 | ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ | 3709894 | 3709296 | 32 |
| 24 | ರೇಷ್ಮೆ ಇಲಾಖೆ | 24588 | 23564 | 31 |
| 25 | ಸಾರ್ವಜನಿಕ ಗ್ರಂಥಾಲಯ ಇಲಾಖೆ | 39944 | 39848 | 31 |
| 26 | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | 366358 | 366229 | 29 |
| 27 | :ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 27338 | 27199 | 26 |
| 28 | ಕೃಷಿ ಮಾರಾಟ ಇಲಾಖೆ | 24078 | 23704 | 24 |
| 29 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 292955 | 292224 | 19 |
| 30 | ಸಹಕಾರ ಸಂಘಗಳ ನಿಬಂಧಕರ ಕಛೇರಿ | 23365 | 22915 | 18 |
| 31 | ಮೀನುಗಾರಿಕೆ ಇಲಾಖೆ | 7942 | 7562 | 18 |
| 32 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 1151 | 1134 | 16 |
| 33 | ಕಾರ್ಖಾನೆಗಳು,ಬಾಯ್ಲರುಗಳು ,ಕೈಗಾರಿಕಾ ಸುರಕ್ಷೆ ಮತ್ತು ಆರೋಗ್ಯ | 33042 | 32040 | 10 |
| 34 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | 6573 | 6537 | 8 |
| 35 | ಲೋಕೋಪಯೋಗಿ,ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ | 1192 | 1181 | 8 |
| 36 | ಕರ್ನಾಟಕ ಗೃಹ ಮಂಡಳಿ | 7881 | 7781 | 7 |
| 37 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 1945 | 1940 | 5 |
| 38 | ಯುವ ಸಬಲೀಕರಣ ಮತ್ತು ಕ್ರೀಡೆ ಇಲಾಖೆ | 383 | 377 | 5 |
| 39 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರೆತುಪಡಿಸಿ ಪೌರ ನಿಗಮಗಳು . | 498874 | 496016 | 4 |
| 40 | ಉನ್ನತ ಶಿಕ್ಷಣ ಇಲಾಖೆಯ -"ಕಾಲೇಜು ಶಿಕ್ಷಣ ಇಲಾಖೆ" | 18439 | 18431 | 4 |
| 41 | ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗ | 610 | 608 | 2 |
| 42 | ವಾರ್ತಾ ಇಲಾಖೆ | 368 | 366 | 2 |
| 43 | ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ | 402008 | 400807 | 2 |
| 44 | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗ | 4714 | 4708 | 1 |
| 45 | ಆಯುಷ್ ಇಲಾಖೆ | 3440 | 3428 | 1 |
| | ಒಟ್ಟು | | | **29325** |

**31/08/2015 ರಂದು 12:00:00 ರಂದು ದಾಖಲೆಗಳಂತೆ**

## ಅಧ್ಯಾಯ 2ಈ: ವಿಳಂಬ ವಿಲೇವಾರಿ ಪ್ರವೃತ್ತಿ (ಆಗಸ್ಟ್ 2015) – ಜಿಲ್ಲಾವಾರು

| ಕ್ರ.ಸ. | ಜಿಲ್ಲೆ | ತಿಂಗಳನಲ್ಲಿ ವಿಲೇಯಾಗಿರುವ ಅರ್ಜಿಗಳು (ಎ) | 1-3 ದಿನಗಳು | 4-7 ದಿನಗಳು | 8-14 ದಿನಗಳು | 15-30 ದಿನಗಳು | 30 ಕ್ಕಿಂತ ಹೆಚ್ಚು ದಿನದಿಂದ ಬಾಕಿ | ಒಟ್ಟು (ಬಿ) | ವಿಳಂಬ ವಿಲೇವಾರಿ ಪ್ರಮಾಣ (ಬಿ/ಎ)% |
|---|---|---|---|---|---|---|---|---|---|
| 1 | ಬೆಂಗಳೂರು ನಗರ | 418603 | 23152 | 8219 | 3238 | 1584 | 946 | 37139 | 8.87 |
| 2 | ವಿಜಯಪುರ | 148032 | 8242 | 1507 | 307 | 107 | 59 | 10222 | 6.91 |
| 3 | ಮೈಸೂರು | 153813 | 6658 | 1752 | 493 | 291 | 532 | 9726 | 6.32 |
| 4 | ಕೊಪ್ಪಳ | 73573 | 3257 | 451 | 270 | 180 | 58 | 4216 | 5.73 |
| 5 | ಕೋಲಾರ | 101796 | 3784 | 389 | 93 | 107 | 108 | 4481 | 4.40 |
| 6 | ಬೀದರ್ | 101784 | 3460 | 449 | 172 | 216 | 89 | 4386 | 4.31 |
| 7 | ಯಾದಗಿರಿ | 68361 | 2380 | 141 | 62 | 118 | 60 | 2761 | 4.04 |
| 8 | ಮಂಡ್ಯ | 109547 | 3636 | 372 | 134 | 99 | 75 | 4316 | 3.94 |
| 9 | ಬಳ್ಳಾರಿ | 141796 | 4198 | 1105 | 122 | 69 | 38 | 5532 | 3.90 |
| 10 | ರಾಮನಗರ | 54701 | 1414 | 373 | 120 | 55 | 41 | 2003 | 3.66 |
| 11 | ಶಿವಮೊಗ್ಗ | 92052 | 1915 | 586 | 344 | 149 | 169 | 3163 | 3.44 |
| 12 | ಚಿಕ್ಕಮಗಳೂರು | 64298 | 1596 | 258 | 94 | 102 | 89 | 2139 | 3.33 |
| 13 | ದಕ್ಷಿಣ ಕನ್ನಡ | 110076 | 1943 | 624 | 510 | 233 | 87 | 3397 | 3.09 |
| 14 | ರಾಯಚೂರು | 121334 | 2850 | 474 | 182 | 61 | 144 | 3711 | 3.06 |
| 15 | ಕೊಡಗು | 32514 | 644 | 51 | 37 | 121 | 59 | 912 | 2.80 |
| 16 | ಬೆಂಗಳೂರು ಗ್ರಾಮಾಂತರ | 57747 | 1075 | 329 | 124 | 56 | 11 | 1595 | 2.76 |
| 17 | ಹಾವೇರಿ | 94227 | 1963 | 245 | 31 | 66 | 17 | 2322 | 2.46 |
| 18 | ಬಾಗಲಕೋಟೆ | 120996 | 2167 | 404 | 117 | 166 | 44 | 2898 | 2.40 |
| 19 | ಗದಗ | 58427 | 726 | 137 | 150 | 158 | 29 | 1200 | 2.05 |
| 20 | ಹಾಸನ | 84830 | 1237 | 195 | 79 | 78 | 44 | 1633 | 1.93 |
| 21 | ಚಿತ್ರದುರ್ಗ | 89460 | 1466 | 26 | 27 | 18 | 8 | 1545 | 1.73 |
| 22 | ಧಾರವಾಡ | 85073 | 971 | 172 | 167 | 127 | 32 | 1469 | 1.73 |
| 23 | ಕಲಬುರಗಿ | 164012 | 2213 | 224 | 103 | 85 | 41 | 2666 | 1.63 |
| 24 | ಬೆಳಗಾವಿ | 274667 | 2756 | 421 | 255 | 280 | 240 | 3952 | 1.44 |
| 25 | ಚಾಮರಾಜನಗರ | 47242 | 364 | 32 | 13 | 23 | 14 | 446 | 0.94 |
| 26 | ತುಮಕೂರು | 165876 | 962 | 71 | 62 | 20 | 9 | 1124 | 0.68 |
| 27 | ದಾವಣಗೆರೆ | 98464 | 468 | 36 | 14 | 78 | 24 | 620 | 0.63 |
| 28 | ಚಿಕ್ಕಬಳ್ಳಾಪುರ | 98025 | 310 | 38 | 24 | 50 | 5 | 427 | 0.44 |
| 29 | ಉಡುಪಿ | 71378 | 242 | 7 | 7 | 5 | 4 | 265 | 0.37 |
| 30 | ಉತ್ತರ ಕನ್ನಡ | 69236 | 190 | 9 | 9 | 2 | 3 | 213 | 0.31 |
| | **ಒಟ್ಟು** | **3371940** | **86239** | **19097** | **7360** | **4704** | **3079** | **120479** | **3.57** |

**31/08/2015 ರಂದು 12:00:00 ರಂದು ದಾಖಲೆಗಳಂತೆ**

**ಟಿಪ್ಪಣಿ:** ವಿಳಂಬ ವಿಲೇವಾರಿಯ ಬಹುತೇಕ ಪಾಲು 10 ( ಕ್ರ.ಸ 1-10) ಜಿಲ್ಲೆಗಳದ್ದಾಗಿದೆ. ರಾಜ್ಯದ ವಿಳಂಬ ವಿಲೆ ಸರಾಸರಿ 3.57%. ಕಳೆದ ತಿಂಗಳ ವಿಳಂಬ ವಿಲೇವಾರಿಯು 3.52% ಇತ್ತು . ವಿಳಂಬ ವಿಲೇವಾರಿಯನ್ನು ಮತ್ತಷ್ಟು ಕಡಿಮೆಗೊಳಸುವ ನಿಟ್ಟಿನಲ್ಲಿ ಆಯಾ ಜಿಲ್ಲಾಡಳಿತವು ಕ್ರಮವಹಿಸಬೇಕು.

## ಅಧ್ಯಾಯ 2ಉ: ವಿಳಂಬ ವಿಲೇವಾರಿ ಪ್ರವೃತ್ತಿ (ಆಗಸ್ಟ್ 2015)–ಇಲಾಖಾವಾರು

| ಕ್ರ.ಸ. | ಇಲಾಖೆ | ತಿಂಗಳನಲ್ಲಿ ವಿಲೇಯಾಗಿರುವ ಅರ್ಜಿಗಳು(ಎ) | 1–3 ದಿನಗಳು | 4–7 ದಿನಗಳು | 8–14 ದಿನಗಳು | 15–30 ದಿನಗಳು | 30 ಕ್ಕಿಂತ ಹೆಚ್ಚು ದಿನದಿಂದ ಬಾಕಿ | ಒಟ್ಟು (ಬಿ) | ವಿಳಂಬ ವಿಲೇವಾರಿ ಪ್ರಮಾಣ (ಬಿ/ಎ)% |
|---|---|---|---|---|---|---|---|---|---|
| 1 | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ | 260 | 12 | 27 | 14 | 14 | 25 | 92 | 35.38 |
| 2 | ಒಳಾಡಳಿತ ಇಲಾಖೆ | 95456 | 4594 | 2157 | 1332 | 813 | 703 | 9599 | 10.06 |
| 3 | ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ | 17 | 1 | 0 | 0 | 0 | 0 | 1 | 5.88 |
| 4 | ಪಶುಸಂಗೋಪನೆ ಮತ್ತು ಮೀನುಗಾರಿಕೆ | 199 | 3 | 0 | 1 | 5 | 2 | 11 | 5.53 |
| 5 | ಶಿಕ್ಷಣ ಇಲಾಖೆ | 18247 | 336 | 128 | 135 | 110 | 148 | 857 | 4.70 |
| 6 | ಕಂದಾಯ ಇಲಾಖೆ | 2064304 | 72051 | 14692 | 4885 | 3256 | 1992 | 96876 | 4.69 |
| 7 | ಕಾರ್ಮಿಕ ಇಲಾಖೆ | 18821 | 529 | 36 | 206 | 1 | 0 | 772 | 4.10 |
| 8 | ನಗರಾಭಿವೃದ್ಧಿ | 74351 | 2107 | 347 | 254 | 233 | 8 | 2949 | 3.97 |
| 9 | ಗೃಹ ಇಲಾಖೆ | 194 | 0 | 2 | 1 | 1 | 0 | 4 | 2.06 |
| 10 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 168946 | 2739 | 480 | 124 | 27 | 64 | 3434 | 2.03 |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 33630 | 555 | 54 | 12 | 4 | 0 | 625 | 1.86 |
| 12 | ಸಹಕಾರ ಇಲಾಖೆ | 1835 | 25 | 3 | 3 | 1 | 0 | 32 | 1.74 |
| 13 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 28021 | 180 | 129 | 78 | 9 | 11 | 407 | 1.45 |
| 14 | ಸಾರಿಗೆ ಇಲಾಖೆ | 544942 | 2867 | 1023 | 302 | 225 | 126 | 4543 | 0.83 |
| 15 | ವಾಣಿಜ್ಯ ಮತ್ತು ಕೈಗಾರಿಕೆ | 5762 | 33 | 0 | 1 | 1 | 0 | 35 | 0.61 |
| 16 | ತೋಟಗಾರಿಕೆ ಇಲಾಖೆ | 1030 | 1 | 0 | 0 | 1 | 0 | 2 | 0.19 |
| 17 | ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ | 110428 | 111 | 18 | 11 | 2 | 0 | 142 | 0.13 |
| 18 | ವಾಣಿಜ್ಯ ತೆರಿಗೆ ಇಲಾಖೆ | 205438 | 95 | 1 | 1 | 1 | 0 | 98 | 0.05 |
| | **ಒಟ್ಟು** | **3371940** | **86239** | **19097** | **7360** | **4704** | **3079** | **120479** | **3.57** |

**31/08/2015 ರಂದು 12:00:00 ರಂದು ದಾಖಲೆಗಳಂತೆ**

**ಟಿಪ್ಪಣಿ:**

ಬಹುತೇಕ ವಿಳಂಬ ವಿಲೇವಾರಿಯು 1–3 ದಿನಗಳ ವರ್ಗದಲ್ಲಿ ಕಂಡುಬರುತ್ತದೆ, ಇದರ ಪ್ರಮಾಣ 80%. ಇದರಲ್ಲಿ ಕಂದಾಯ ಇಲಾಖೆಯು 96,876 ಅರ್ಜಿಗಳ ವಿಳಂಬ ವಿಲೇವಾರಿಯೊಂದಿಗೆ 66% ರಷ್ಟು ಪಾಲು **"ಎಲ್ಲಾ ತರಹದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು"** ಸೇವೆಯುದ್ದಾಗಿದೆ. ಇದರಿಂದಾಗಿ ಒಟ್ಟಾರೆ ವಿಳಂಬ ವಿಲೇವಾರಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ, ಸೂಕ್ಷ್ಮವಾಗಿ ಗಮನಿಸಿ ಕಾರ್ಯವೈಖರಿಯ ಪರಾಮರ್ಶೆಯಿಂದ ವಿಳಂಬ ವಿಲೇವಾರಿಯನ್ನು ಇಲಾಖೆಗಳು ನಿಯಂತ್ರಿಸಬೇಕಿದೆ.

# ಅಧ್ಯಾಯ 2ಊ: ತಿರಸ್ಕೃತ ಅರ್ಜಿಗಳ ಮಾಹಿತಿ (ಆಗಸ್ಟ್ 2015) – ಜಿಲ್ಲಾವಾರು

| ಕ್ರ.ಸ. | ಜಿಲ್ಲೆ | ಒಟ್ಟು ಸ್ವೀಕೃತಿ | ಒಟ್ಟು ವಿಲೇವಾರಿ | ತಿರಸ್ಕೃತ | ತಿರಸ್ಕೃತಗಳ ಪ್ರಮಾಣ(%) |
|---|---|---|---|---|---|
| 1 | ಬೀದರ್ | 86951 | 101784 | 8013 | 8.91 |
| 2 | ಹಾಸನ | 78664 | 84830 | 6302 | 8.44 |
| 3 | ಚಿಕ್ಕಮಗಳೂರು | 56813 | 64298 | 4211 | 7.76 |
| 4 | ದಾವಣಗೆರೆ | 78334 | 98464 | 5884 | 6.9 |
| 5 | ಬೆಂಗಳೂರು ನಗರ | 384581 | 418603 | 23507 | 6.64 |
